## Jobs secured for different categories of Backward Class applicants through Employment Exchanges.

817. SRI PRABHAKAR TELKAR (Chittapur).—Will the Minister for Labour be pleased to state :—

(a) the number of jobs secured for different categories of backward class applicants through employment exchanges in the State namely, BCM, BCT, BT, BSG and others (Year-wise up-to-date information since the issue of Backward Classes reservation order of 4-3-1977 may please be furnished) ?

SRI A. B. JAKANUR (Minister for Labour).—

| Year | BCM | BCT | BT | BSG | Others | Total |
|---|---|---|---|---|---|---|
| 1977-78 | 638 | 353 | 153 | 398 | 13066 | 14608 |
| 1978-79 | 1316 | 549 | 346 | 689 | 13203 | 16103 |
| 1979-80 | 1430 | 689 | 427 | 737 | 9577 | 12860 |
| 1980-81 | 1295 | 681 | 463 | 1688 | 15795 | 19922 |
| 1981-82 (from April 1981 to June 1981) | 299 | 136 | 101 | 220 | 3928 | 4684 |
| Total | 4978 | 2408 | 1490 | 3732 | 55569 | 68177 |

ಶ್ರೀ ಎ.ಬಿ. ಜಕನೂರು.—ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ೧೯೮೦-೮೧ನೇ ಸಾಲಿನ ಮೂರು ತಿಂಗಳ ಅಂಕಿಅಂಶಗಳನ್ನು ಕೊಟ್ಟಿದೆ. ಮಿಕ್ಕ ಅಂಕಿಅಂಶಗಳನ್ನು ಈಗ ಕೊಡುತ್ತೇನೆ. ೧೯೮೧-೮೨ನೇ ಸಾಲಿಗೆ ನೀಡಿರುವ ಉದ್ಯೋಗಗಳ ಸಂಖ್ಯೆ ಬಿ.ಸಿ.ಎಂ. ೧೭೭೩, ಬಿ ಟಿ. ೪೪೨, ಬಿ.ಎಸ್ ಜಿ. ೯೦೧, ಇತರೆ ೧೩,೪೯೯. ಒಟ್ಟು ೧೭,೭೫೬.

ಶ್ರೀ ಪ್ರಭಾಕರ್ ತೇಲ್ಕರ್.—ತಾವು ನೀಡಿರುವ ಅಂಕಿ ಸಂಖ್ಯೆಗಳು ಸರ್ಕಾರಿ ಇಲಾಖೆಗಳಲ್ಲಿ ಕೊಟ್ಟಿರುವ ಉದ್ಯೋಗಗಳ ಸಂಖ್ಯೆ ಇದ್ದಂತೆ ಕಾಣುತ್ತಿದೆ. ಆದರೆ ಸಹಕಾರಿ ಸಂಸ್ಥೆಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ, ಸರ್ಕಾರದಿಂದ ಅನುದಾನ ಪಡೆಯುವ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ ಕೆಲಸ ಕೊಟ್ಟಿದ್ದೀರಾ ಎಂಬುದನ್ನು ಹೇಳಿ.

ಶ್ರೀ ಎ ಬಿ ಜಕನೂರ್.—ಸಹಜವಾಗಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಆಗಿದ್ದು ಕೆಲವು ಸರ್ಕಾರಿ ಸಂಸ್ಥೆಗಳಲ್ಲೂ ಉದ್ಯೋಗಗಳನ್ನು ಕೊಡಲಾಗಿದೆ. ಎಲ್ಲಾ ಕಡೆ ಆಗಿಲ್ಲ. ನೋಟಿಫಿಕೇಷನ್ ಹಾಕಿ ಈ ಉದ್ಯೋಗಗಳನ್ನು ರಾಜ್ಯ ಮತ್ತು ಕೇಂದ್ರದ ಪಬ್ಲಿಕ್ ಅಂಡರ್‌ಟೇಕಿಂಗ್ ಸಂಸ್ಥೆಗಳಲ್ಲಿ ಕೊಟ್ಟಿದ್ದಾರೆ. ಕೆಲವು ಕಡೆ ಸರ್ಕಾರಿ ಹುದ್ದೆಗಳನ್ನೂ ಕೊಡಲಾಗಿದೆ.

ಶ್ರೀ ಪ್ರಭಾಕರ್ ತೇಲ್ಕರ್.—ಸರ್ಕಾರಿ ಕೆಲಸವನ್ನು ಇದರಲ್ಲಿ ಸೇರಿಸಿಲ್ಲವೆ ?

ಶ್ರೀ ಎ.ಬಿ. ಜಕನೂರ್.—ಇದರಲ್ಲಿ ಹೆಚ್ಚಾಗಿ ನಾಲ್ಕನೇ ದರ್ಜೆ ನೌಕರರಿದ್ದಾರೆ.

ಶ್ರೀ ಪ್ರಭಾಕರ್ ತೇಲ್ಕರ್.—ವಿವರಣೆ ಕೊಡುತ್ತೀರಾ ?

ಶ್ರೀ ಎ.ಬಿ. ಜಕನೂರ್.—ಇಲ್ಲಿ ದೊಡ್ಡ ವಿವರಣೆ ಇದೆ ಮೂರು ನಾಲ್ಕು ವರ್ಷದ ಪರಿಸ್ಥಿತಿಯನ್ನು ಸದಸ್ಯರು ಕೇಳಿದ್ದಾರೆ. ಒಟ್ಟು ೮೦,೨೪೯ ಜನರಿಗೆ ನೌಕರಿ ಒದಗಿಸಲಾಗಿದೆ. ಆದರೆ ಯಾವ ಯಾವ ಹುದ್ದೆಗಳು ಎಂಬ ಬಗ್ಗೆ ವಿವರಣೆ ಕೊಡುವುದು ಕಷ್ಟ. ಮಾನ್ಯ ಸದಸ್ಯರಿಗೆ ಬೇಕಾದರೆ ಅದನ್ನು ತರಿಸಿಕೊಡುತ್ತೇನೆ.

SRI K. BHASKAR NAIDU —Sir, these three categories namely BCM, BCT and BT makes the total of 8,876 and the grand total works out to 68,177. Now if we divide the total of these category by 68,177 it comes to 8%. So, I would like to know what is the actual total percentage of jobs that must be given to these category of people ?

SRI A.B. JAKANUR.—The total works out to 18%.

SRI K. BHASKAR NAIDU.—The Hon'ble Minister is giving the percentage after taking into consideration BCM, BCT, BT, BSG and others. I am not asking that percentage. My specific question is about the three categories, namely, BCM, BCT, BT. I would like to know the percentage of jobs given to these three categories.

ಶ್ರೀ ಎ. ಬಿ. ಜಕನೂರ್.—ಎಲ್ಲ ವರ್ಗದವರಿಗೂ ಕೊಡಬೇಕಾಗುತ್ತದೆ. ನಾವು ಹೆಸರನ್ನು ಕಳುಹಿಸುತ್ತೇವೆ. ಅವರು ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ವಿ. ವಿ. ಪತ್ತಾರ್.—ಮಾನ್ಯ ಮಂತ್ರಿಯವರು ಈಗ ೧೮ ಪರ್ಸೆಂಟ್‌ನಷ್ಟು ಉದ್ಯೋಗಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಒಟ್ಟು ರಿಸರ್ವ್ ಮಾಡಿದ್ದು ೩೪ ಪರ್ಸೆಂಟ್. ಅಂದರೆ ಇನ್ನೂ ಸುಮಾರು ೧೬ ಪರ್ಸೆಂಟ್‌ನಷ್ಟು ಕೊಡಬೇಕಾಗಿದೆ. ಆದ್ದರಿಂದ ಮುಂದೆ ನೌಕರಿ ಕೊಡುವಾಗ ಹಿಂದುಳಿದ ವರ್ಗದವರಿಗೆ ಹೆಚ್ಚಿನ ಅವಕಾಶ ನೀಡುತ್ತಾರೆಯೇ ?

ಶ್ರೀ ಎ. ಬಿ. ಜಕನೂರ್.—ಸಂಸ್ಥೆಯವರು ಕೇಳಿದಹಾಗೆ ಉದ್ಯೋಗ ವಿನಿಮಯ ಕಚೇರಿಯಿಂದ ಹೆಸರುಗಳನ್ನು ಕಳುಹಿಸುತ್ತಾರೆ. ನೌಕರಿಗೆ ತೆಗೆದುಕೊಳ್ಳುವವರು ಪರ್ಸೆಂಟೇಜ್ ಫಾಲೋ ಮಾಡಬೇಕಾಗುತ್ತದೆ. ನಾವು ಬರೀ ಹೆಸರನ್ನು ಮಾತ್ರ ಕೊಡುತ್ತೇವೆ.

ಶ್ರೀ ವಿ. ವಿ. ಪತ್ತಾರ್.—ಇಂಟರ್‌ವ್ಯೂ ಕರೆಯುವಾಗ ಒಂದು ಕೆಲಸಕ್ಕೆ ೧೦ ಜನರಂತೆ ಕರೆಯುತ್ತಾರೆ. ಆ ಪ್ರಮಾಣದಲ್ಲಿ ಕರೆಯುವಾಗ ಹಿಂದುಳಿದವರಿಗೆ ಇಷ್ಟು ಪರ್ಸೆಂಟೇಜ್ ಎಂದು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ಯಾವ ಇಲಾಖೆಯಲ್ಲಿ ಕರೆಯುತ್ತಾರೋ ಅವರಿಗೆ ಉದ್ಯೋಗ ವಿನಿಮಯ ಕಚೇರಿಯಿಂದ ಹೆಸರು ಕಳುಹಿಸಿಕೊಡುತ್ತಾರೆ. ನಿಮಗೆ ಹೆಚ್ಚಿನ ವಿವರಣೆ ಬೇಕಾದರೆ ಬೇರೆ ಪ್ರಶ್ನೆ ಕೇಳಿ.

SRI K. BHASKAR NAIDU.—Even the Employment Exchange has not taken into consideration the percentage while sending the list to various departments, thus the students belonging to BCM BCT, and BT are not getting job opportunities in Public Sector Undertakings as well as in Government Departments.

SRI A B. JAKANUR.—This doesn't arise Kelasakke tegedukollavaru yava kyatagari janarannu keLuttaare Antha janarannu naavu kaLuhisikoDuttevE. SC. ST. vargadalli eshTu janarannu avaru keLuttaare aShTannu naavu kaLuhisikoDuttevE. naavu hesarugaLannu kaLuhisikoTTa mEle avaru udyOgavannu niiDuttaare. avaru nEmaka maaDikoNDa mEle kelavaru namage tiLisuttaare, innu kelavaru namage tiLisuvudilla,

ಶ್ರೀ ಪ್ರಭಾಕರ ತೇಲ್ಕರ್.—ತಮ್ಮ ಕಡೆ ಹೆಸರುಗಳನ್ನು ಕೇಳುವಾಗ ನೀವು ಹೆಸರನ್ನು ಕಳುಹಿಸುತ್ತೀರಿ. ಆಗ ನೀವು ರಿಸರ್ವೇಷನ್ ಪ್ರಕಾರ ಕಳುಹಿಸಬೇಕಲ್ಲವೆ ?

ಅಧ್ಯಕ್ಷರು.—ಯಾವ ಯಾವ ಇಲಾಖೆಯವರು ಎಷ್ಟೆಷ್ಟು ಜನರು ಬೇಕು ಎಂದು ಹೇಳುತ್ತಾರೋ ಅಷ್ಟು ಜನರ ಹೆಸರುಗಳನ್ನು ಮಾತ್ರ ಕಳುಹಿಸುವುದು ನಮ್ಮ ಕೆಲಸ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಬೇರೆ ವಿವರಣೆಯನ್ನು ಅವರು ಕೊಡುವುದಕ್ಕಾಗುವುದಿಲ್ಲ.

SRI PRABHAKAR R. TELKAR.—Sir, I would like to know from the Hon'ble Minister whether the Employment Exchange is adhering to the Government Order issued in the year 1977 in respect of reservation of posts to different castes and groups. Are they implementing the G.O issued ?

ಶ್ರೀ ಎ.ಬಿ. ಜಕನೂರು.—ಪಬ್ಲಿಕ್ ಅಂಡರ್‌ಟೇಕಿಂಗ್ ಇರಲಿ, ಖಾಸಗಿ ಸಂಸ್ಥೆಗಳಿರಲಿ, ಸರ್ಕಾರಿ ಇಲಾಖೆಯೇ ಇರಲಿ, ಮೀಸಲಾತಿ ಪ್ರಮಾಣವನ್ನು ಅನುಸರಿಸಿ ನೌಕರಿ ಕೊಡಬೇಕಾಗುತ್ತದೆ. ಅವರು ನಮಗೆ ನಾವು ಇಷ್ಟು ಜನ ಎಸ್.ಟಿ.ಯವರನ್ನು ತುಂಬಿಕೊಳ್ಳುತ್ತೇವೆ, ಲಿಸ್ಟ್ ಕಳಿಸಿ ಎಂದು ಹೇಳುತ್ತಾರೆ. ಆಗ ನಾವು ಕಳುಹಿಸುತ್ತೇವೆ. ಆ ರೀತಿ ಕಳುಹಿಸಿರುವವರ ಪೈಕಿ ಎಷ್ಟು ಜನರಿಗೆ ಉದ್ಯೋಗಗಳು ಸಿಕ್ಕಿದೆ ಎಂಬುದನ್ನು ತಿಳಿಸಿದ್ದೇನೆ. ಉದ್ಯೋಗ ವಿನಿಮಯ ಕಚೇರಿಯ ಮೂಲಕ ಅಷ್ಟು ಜನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿಕೊಡಲಾಗಿದೆ. We are sending the list through the Employment Exchange. I am placing it before the House.

## Supply of Drinking Water to the Nittur Village of Bhalki Taluk.

919 SRI BHIMANNA KHANDRE (Bhalki).—Will the Minister for Rural Development and Panchayat Raj be pleased to state—

(a) whether there is a comprehensive scheme pending sanction to supply adequate drinking water to the whole village of Nittur, Taluk Bhalki :

(b) steps taken by Government to provide drinking water to the localities of the Scheduled Caste, Weaker sections and Janata House Colony in village Nittur-Taluk Bhalki ?

SRI B. RAMAIAH (Minister for Rural Development and Panchayat Raj).—

(a) Drinking water supply to Nittur village is not pending sanction at present since the scheme was administratively approved by Government vide G O. No. DPC/VRW/65-66, dated 25-6-1965 at a cost of Rs. 68,000 and subsequently an improvement scheme was also approved by Government during 1980-81 at a cost of Rs. 56,000.

(b) Necessary provisions are made in the sanctioned improvement scheme to lay pipelines to Harijan Wada and other weaker sections of village, Nittur, As regards Janatha Housing colony, during execution, providing additional line will be considered.

ಶ್ರೀ ಹೆಚ್. ಗಂಗಾಧರನ್ (ಶ್ರೀ ಭೀಮಣ್ಣ ಖಂಡ್ರೆಯವರ ಪರವಾಗಿ).—ಭಾಲ್ಕಿ ತಾಲ್ಲೂಕಿಗೆ ದಿನಾಂಕ ೨೫-೬-೧೯೬೫ರ ಸರ್ಕಾರಿ ಆಜ್ಞೆ ಪ್ರಕಾರ ೬೮,೦೦೦ ರೂಪಾಯಿಗಳ ಅಂದಾಜು ವೆಚ್ಚದಲ್ಲಿ